ನಗರ ಮತ್ತು ಗ್ರಾಮಾಂತರ ಯೋಜನಾ
ಜಂಟಿ ನಿರ್ದೇಶಕರ ಕಛೇರಿ
(ಬೆಂಗಳೂರು ವಿಭಾಗ)
ಬಹು ಮಹಡಿಗಳ ಕಟ್ಟಡ, ಗೇಟ್-4,
ಪಿ ಬಿ ನಂ. 5257
ಡಾ. ಬಿ. ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು - 560001


# ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರ ವಿಭಾಗೀಯ ಕಚೇರಿ,

ಬಹು ಮಹಡಿಗಳ ಕಟ್ಟಡ, 4ನೇ ಹಂತ, ಡಾ:ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು–560001

ದೂರವಾಣಿ ಸಂಖ್ಯೆ: 080–22353973 E-Mail ID – jdtpbangalore@gmail.com


---

ಸಂಖ್ಯೆ: ನಗ್ರಾಯೋ/ವಿಕಬೆಂ–01/ತಾಂ.ಶಾಖೆ/31/ವಿನ್ಯಾಸ/2020–21 | 408 **20 OCT 2020**

***ನೋಂದಾಯಿತ ಅಂಚೆ/ಸ್ವೀಕೃತಿ ನಿರೀಕ್ಷೆ***

## "ತಾಂತ್ರಿಕ ಅನುಮೋದನೆ"

ವಿಷಯಃ ಚಿಕ್ಕಬಳ್ಳಾಪುರ ಜಿಲ್ಲೆ, ಶಿಡ್ಲಘಟ್ಟ ತಾಲ್ಲೂಕು, ಜಂಗಮಕೋಟೆ ಹೋಬಳಿ, ಹೇಮಾರ್ಲಹಳ್ಳಿ ಗ್ರಾಮದ ಸ.ನಂ. 106/4 ರಲ್ಲಿ 00ಎಕರೆ–30ಗುಂಟೆ, ಕೃಷ್ಣಮ್ಮನಹೊಸೂರು ಗ್ರಾಮದ ಸ.ನಂ. 10/3 ರಲ್ಲಿ 00ಎಕರೆ–22ಗುಂಟೆ (0ಎ–01ಗುಂ 'ಬ' ಖರಾಬು ಹೊರತುಪಡಿಸಿದೆ) ಸ.ನಂ. 10/8 ರಲ್ಲಿ 00ಎಕರೆ–15ಗುಂಟೆ (0ಎ–0.12ಗುಂ 'ಬ' ಖರಾಬು ಹೊರತುಪಡಿಸಿದೆ) ಸ.ನಂ. 10/7 ರಲ್ಲಿ 00ಎಕರೆ–15ಗುಂಟೆ (0ಎ–0.12ಗುಂ 'ಬ' ಖರಾಬು ಹೊರತುಪಡಿಸಿದೆ), ಸ.ನಂ. 10/6 ರಲ್ಲಿ 00ಎಕರೆ–15ಗುಂಟೆ (0ಎ–0.08ಗುಂ 'ಬ' ಖರಾಬು ಹೊರತುಪಡಿಸಿದೆ) ಸ.ನಂ. 10/5 ರಲ್ಲಿ 00ಎಕರೆ–15ಗುಂಟೆ (0ಎ–0.08ಗುಂ 'ಬ' ಖರಾಬು ಹೊರತುಪಡಿಸಿದೆ) ಸ.ನಂ. 10/2 ರಲ್ಲಿ 00ಎಕರೆ–14ಗುಂಟೆ (0ಎ–0.08ಗುಂ 'ಬ' ಖರಾಬು ಹೊರತುಪಡಿಸಿದೆ) ಸ.ನಂ. 8/2 ರಲ್ಲಿ 01ಎಕರೆ–18ಗುಂಟೆ (0ಎ–02ಗುಂ 'ಬ' ಖರಾಬು ಹೊರತುಪಡಿಸಿದೆ) ಮತ್ತು ಸ.ನಂ. 8/3 ರಲ್ಲಿ 01ಎಕರೆ–35ಗುಂಟೆ ಒಟ್ಟು 06ಎಕರೆ–19ಗುಂಟೆ ವಿಸ್ತೀರ್ಣದ ಜಮೀನುಗಳನ್ನು ವಸತಿ ಉದ್ದೇಶಕ್ಕಾಗಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖಃ
1. ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಇವರ ಅಧಿಕೃತ ಜ್ಞಾಪನ ಪತ್ರಗಳ ಸಂಖ್ಯೆ: ಎಲ್.ಎ.ಎನ್.ಡಿ. 10011322, 10011394 ದಿನಾಂಕ: 20/07/2020, ಎಲ್.ಎ.ಎನ್.ಡಿ. 10011395, 10011467, 10011393, 10011400, 10011401, 10011404 ದಿನಾಂಕ: 17/12/2019 ಮತ್ತು ಎಲ್.ಎ.ಎನ್.ಡಿ. 10011592 ದಿನಾಂಕ: 23/09/2020.
2. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕುಂಭಿಗಾನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯ, ಶಿಡ್ಲಘಟ್ಟ ತಾಲ್ಲೂಕು ಇವರ ಪತ್ರ ದಿನಾಂಕ: 30.09.2020.
3. ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ಚಿಕ್ಕಬಳ್ಳಾಪುರ ಇವರ ಪತ್ರ ಸಂಖ್ಯೆ: ನಗ್ರಾಯೋಸನಿ/ಚಿಬ/ವಿನ್ಯಾಸ/33/2020–21/561 ದಿನಾಂಕ: 07/10/2020.
4. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಕೈಪಿಡಿ ಸಂಖ್ಯೆ: ಗ್ರಾಅಪ/86/ ಗ್ರಾಪಂಅ/2014 ದಿನಾಂಕ:11/11/2014.

*****

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಅಧಿಕೃತ ಜ್ಞಾಪನ ಪತ್ರಗಳನ್ವಯ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ಇವರು ಚಿಕ್ಕಬಳ್ಳಾಪುರ ಜಿಲ್ಲೆ, ಶಿಡ್ಲಘಟ್ಟ ತಾಲ್ಲೂಕು, ಜಂಗಮಕೋಟೆ ಹೋಬಳಿ, ಹೇಮಾರ್ಲಹಳ್ಳಿ ಗ್ರಾಮದ ಸ.ನಂ. 106/4 ರಲ್ಲಿ 00ಎಕರೆ–30ಗುಂಟೆ, ಕೃಷ್ಣಮ್ಮನಹೊಸೂರು ಗ್ರಾಮದ ಸ.ನಂ. 10/3 ರಲ್ಲಿ 00ಎಕರೆ–22ಗುಂಟೆ (0ಎ–01ಗುಂ 'ಬ' ಖರಾಬು ಹೊರತುಪಡಿಸಿದೆ) ಸ.ನಂ. 10/8 ರಲ್ಲಿ 00ಎಕರೆ–15ಗುಂಟೆ (0ಎ–0.12ಗುಂ 'ಬ' ಖರಾಬು ಹೊರತುಪಡಿಸಿದೆ) ಸ.ನಂ. 10/7 ರಲ್ಲಿ 00ಎಕರೆ–15ಗುಂಟೆ (0ಎ–0.12ಗುಂ 'ಬ'

. . . .2

ಖರಾಬು ಹೊರತುಪಡಿಸಿದೆ), ಸ.ನಂ. 10/6 ರಲ್ಲಿ 00ಎಕರೆ-15ಗುಂಟೆ (0ಎ-0.08ಗುಂ 'ಬ' ಖರಾಬು ಹೊರತುಪಡಿಸಿದೆ) ಸ.ನಂ. 10/5 ರಲ್ಲಿ 00ಎಕರೆ-15ಗುಂಟೆ (0ಎ-0.08ಗುಂ 'ಬ' ಖರಾಬು ಹೊರತುಪಡಿಸಿದೆ) ಸ.ನಂ. 10/2 ರಲ್ಲಿ 00ಎಕರೆ-14ಗುಂಟೆ (0ಎ-0.08ಗುಂ 'ಬ' ಖರಾಬು ಹೊರತುಪಡಿಸಿದೆ) ಸ.ನಂ. 8/2 ರಲ್ಲಿ 01ಎಕರೆ-18ಗುಂಟೆ (0ಎ-02ಗುಂ 'ಬ' ಖರಾಬು ಹೊರತುಪಡಿಸಿದೆ) ಮತ್ತು ಸ.ನಂ. 8/3 ರಲ್ಲಿ 01ಎಕರೆ-35ಗುಂಟೆ ಒಟ್ಟು 06ಎಕರೆ-19ಗುಂಟೆ ವಿಸ್ತೀರ್ಣದ ಜಮೀನುಗಳನ್ನು ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತಿಸಿ ಆದೇಶ ಹೊರಡಿಸಿರುತ್ತಾರೆ. ಸದರಿ ಭೂ ಪರಿವರ್ತಿತ ಜಮೀನುಗಳಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದಿಸಿಕೊಡಲು ಕುಂಭಿಗಾನಹಳ್ಳಿ ಗ್ರಾಮ ಪಂಚಾಯಿತಿಯನ್ನು ಅರ್ಜಿದಾರರು ಕೋರಿದ್ದು, ಅದರನ್ವಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕುಂಭಿಗಾನಹಳ್ಳಿ ಗ್ರಾಮ ಪಂಚಾಯಿತಿ ಇವರು ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ಚಿಕ್ಕಬಳ್ಳಾಪುರ ಇವರನ್ನು ಉಲ್ಲೇಖ (2) ರಲ್ಲಿ ವಿನ್ಯಾಸ ನಕ್ಷೆ ತಯಾರಿಸಿ ಅನುಮೋದನೆ ನೀಡಲು ಕೋರಿರುತ್ತಾರೆ. ಪ್ರಶ್ನಿತ ಜಮೀನುಗಳ ವಿಸ್ತೀರ್ಣವು ಬೆಂಗಳೂರು ವಿಭಾಗೀಯ ಕಛೇರಿಯ ಕಾರ್ಯವ್ಯಾಪ್ತಿಗೆ ಬರುವುದರಿಂದ ಕರಡು ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ಚಿಕ್ಕಬಳ್ಳಾಪುರ ರವರು ಉಲ್ಲೇಖ (3) ರಲ್ಲಿ ಮಾಹಿತಿ/ದಾಖಲೆಗಳೊಂದಿಗೆ ಹಾಗೂ ಶಿಫಾರಸ್ಸಿನೊಂದಿಗೆ ಈ ಕಛೇರಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ಚಿಕ್ಕಬಳ್ಳಾಪುರ ಇವರು ಸಲ್ಲಿಸಿರುವ ಕರಡು ವಸತಿ ವಿನ್ಯಾಸ ನಕ್ಷೆ ಮತ್ತು ಕಂದಾಯ ಇಲಾಖೆಯಿಂದ ನೀಡಿರುವ ಸರ್ವೆ ನಕ್ಷೆಯನ್ವಯ ಯೋಜನಾತತ್ವಗಳಡಿಯಲ್ಲಿ ವಸತಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಲಾಗಿದೆ.

ಸದರಿ ವಿನ್ಯಾಸದಲ್ಲಿ ವಸತಿಗಾಗಿ **13145.49** ಚ.ಮೀ **(ಶೇ. 50.17)**, ಉದ್ಯಾನವನಕ್ಕಾಗಿ **1399.80** ಚ.ಮೀ **(ಶೇ.05.34)**, ನಾಗರೀಕ ಸೌಲಭ್ಯಕ್ಕಾಗಿ **1319.68** ಚ.ಮೀ **(ಶೇ.05.04)**, ಮತ್ತು ರಸ್ತೆಗಾಗಿ **10338.06** ಚ.ಮೀ **(ಶೇ.39.45)** ರಷ್ಟು ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಲಾಗಿದೆ. ವಸತಿಗಾಗಿ ಕಾಯ್ದಿರಿಸಲಾದ ವಿಸ್ತೀರ್ಣದಲ್ಲಿ ಒಟ್ಟು **94** ನಿವೇಶನಗಳನ್ನು ಅಳವಡಿಸಲಾಗಿದ್ದು, ಅದರಲ್ಲಿ **9.14ಮೀ x 15.24ಮೀ** ಅಳತೆಯ **20** ನಿವೇಶನಗಳನ್ನು, **9.14ಮೀ x 12.19ಮೀ** ಅಳತೆಯ **30** ನಿವೇಶನಗಳನ್ನು, **9.14ಮೀ x ಅನಿಯತ** ಅಳತೆಯ **10** ನಿವೇಶನಗಳನ್ನು ಮತ್ತು **34** ಅನಿಯತ ನಿವೇಶನಗಳನ್ನು ಅಳವಡಿಸಲಾಗಿದೆ.

ಸದರಿ ವಿನ್ಯಾಸವನ್ನು ಕಾರ್ಯಗತಗೊಳಿಸುವ ಸಂಬಂಧ ಗ್ರಾಮ ಪಂಚಾಯಿತಿಯು ವಿನ್ಯಾಸ ಅನುಮೋದನೆ ಆದೇಶ ಹೊರಡಿಸಬೇಕಾಗಿದ್ದು, **ಉಲ್ಲೇಖ (4) ರ ಕೈಪಿಡಿಯಲ್ಲಿನ ಮಾರ್ಗಸೂಚಿಗಳನ್ನು ಹಾಗೂ ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಅನುಸರಿಸುವ ನಿಬಂಧನೆಗೆ ಒಳಪಟ್ಟು ಕಾರ್ಯರೂಪಕ್ಕೆ ತರಲು ತಾಂತ್ರಿಕ ಅನುಮೋದನೆ ನೀಡಲಾಗಿದೆ.**

1. **ವಿನ್ಯಾಸವು ಅನುಮೋದನೆ ದಿನದಿಂದ ಎರಡು ವರ್ಷಗಳ ಅವಧಿಗೆ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಿನ್ಯಾಸ ಅಭಿವೃದ್ಧಿ ಪೂರ್ಣಗೊಳ್ಳದಿದ್ದಲ್ಲಿ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯಿಂದ ವಿನ್ಯಾಸ ಅನುಮೋದನೆ ನವೀಕರಿಸತಕ್ಕದ್ದು.**
2. ವಿನ್ಯಾಸ ಕಾರ್ಯಗತಗೊಳಿಸುವ ಮೊದಲು ಸಂಬಂಧಪಟ್ಟ ಗ್ರಾಮ ಪಂಚಾಯಿತಿಯಿಂದ ಅಗತ್ಯ ಅನುಮತಿ ಪಡೆಯಬೇಕು.
3. ಅಭಿವೃದ್ಧಿ ಶುಲ್ಕವನ್ನು ಅಂದಾಜು ಪಟ್ಟಿಯಂತೆ ಹಾಗೂ ಇತರೆ ಶುಲ್ಕಗಳನ್ನು ಕಾನೂನು ಪ್ರಕಾರ ಹಾಗೂ ಸರ್ಕಾರಿ ಆದೇಶಗಳನ್ವಯ ಮುಂಗಡವಾಗಿ ಪಡೆಯತಕ್ಕದ್ದು.
4. ಅನುಮೋದಿತ ವಿನ್ಯಾಸದಲ್ಲಿರುವಂತೆಯೇ ನಿವೇಶನಗಳು, ರಸ್ತೆಗಳು ಮತ್ತಿತರ ಸಾರ್ವಜನಿಕ ಉದ್ದೇಶದ ಪ್ರದೇಶಗಳನ್ನು ಅಭಿವೃದ್ಧಿಪಡಿಸಬೇಕು.
5. **ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಪೂರ್ವಾನುಮತಿಯಿಲ್ಲದೆ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು.**

. . . .3

6. ವಿನ್ಯಾಸ ಪ್ರದೇಶದಲ್ಲಿ ಹಾಲಿ ಇರತಕ್ಕ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು, ಮತ್ತು ರಸ್ತೆಗಳ ಎರಡು ಕಡೆ ಹಾಗೂ ಉದ್ಯಾನವನದಲ್ಲಿ ಹೊಸ ಸಸಿಗಳನ್ನು ಬೆಳೆಸಲು ಸೂಕ್ತ ಕ್ರಮ ಕೈಗೊಳ್ಳಬೇಕು.
7. ಅನುಮೋದಿತ ವಸತಿ ವಿನ್ಯಾಸದಲ್ಲಿರುವ ರಸ್ತೆಗಾಗಿ **10338.06 ಚ.ಮೀ**, ಉದ್ಯಾನವನಕ್ಕಾಗಿ **1399.80 ಚ.ಮೀ** ಮತ್ತು ನಾಗರೀಕ ಸೌಲಭ್ಯಕ್ಕಾಗಿ **1319.68 ಚ.ಮೀ** ವಿಸ್ತೀರ್ಣದ ಕಾಯ್ದಿರಿಸಿರುವ ಪ್ರದೇಶಗಳನ್ನು, ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯು / ಗ್ರಾಮ ಪಂಚಾಯಿತಿಯು ಅರ್ಜಿದಾರರಿಗೆ / ಅಭಿವೃದ್ಧಿದಾರರಿಗೆ ಯಾವುದೇ ಪರಿಹಾರವನ್ನು ನೀಡದೆ ಪುಕ್ಕಟೆಯಾಗಿ ನೋಂದಾಯಿತ ಪರಿತ್ಯಜನಾ ಪತ್ರದ ಮೂಲಕ ಪಡೆಯತಕ್ಕದ್ದು.
8. **ವಿನ್ಯಾಸವನ್ನು ಪೂರ್ಣವಾಗಿ ಅಭಿವೃದ್ಧಿಪಡಿಸಿದ ನಂತರವೇ ಗ್ರಾಮ ಪಂಚಾಯಿತಿಯಿಂದ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡತಕ್ಕದ್ದು.**
9. ಅಭಿವೃದ್ಧಿ ಕಾಮಗಾರಿಗಳು ಮುಗಿದ ನಂತರ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯಿಂದ ಕಾಮಗಾರಿ ಮುಕ್ತಾಯ ಪ್ರಮಾಣಪತ್ರ ಪಡೆಯಬೇಕು.
10. ಈ ವಿನ್ಯಾಸದಲ್ಲಿ ಕಟ್ಟಡ ಕಟ್ಟುವ ಮೊದಲು ಸಂಬಂಧಪಟ್ಟ ಗ್ರಾಮ ಪಂಚಾಯಿತಿಯಿಂದ ಅನುಮತಿ ಪತ್ರ ಪಡೆಯತಕ್ಕದ್ದು.
11. ನಿವೇಶನ ಬಿಡುಗಡೆಯ ಮೊದಲನೇ ಹಂತವಾಗಿ ಶೇ.60 ರಷ್ಟು ಹಾಗೂ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಅರ್ಜಿದಾರರು/ಅಭಿವೃದ್ಧಿದಾರರು ಒದಗಿಸಿದ ನಂತರ ಉಳಿಕೆ ಶೇ.40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡತಕ್ಕದ್ದು. (ಕೈಪಿಡಿಯ ಮಾರ್ಗಸೂಚಿಯನ್ವಯ).
12. ಅನುಮೋದಿತ ವಿನ್ಯಾಸದ ಸೂಕ್ತ ಸ್ಥಳಗಳಲ್ಲಿ ನೀರು ಇಂಗುಗುಳಿ (Water Recharge) ಮತ್ತು ಮಳೆ ನೀರು ಸಂಗ್ರಹಣೆ (Rain water harvesting pits) ಗಳನ್ನು ಗುರ್ತಿಸಿ ವಿನ್ಯಾಸದಲ್ಲಿ ಮಳೆ ನೀರು ಸಂಗ್ರಹಣೆ ಪದ್ಧತಿಯನ್ನು ಕಡ್ಡಾಯವಾಗಿ ಅಳವಡಿಸಿ ಅಂತರ್ ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
13. ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕ ಪಕ್ಕದ ಜಮೀನುಗಳಿಗೆ ಇರುವ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.
14. ವಿನ್ಯಾಸ ಅಂಗೀಕಾರ ಸಂಬಂಧ ಇತರೆ ಯಾವುದೇ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆಯಬೇಕಾದ್ದಲ್ಲಿ ಅರ್ಜಿದಾರರಿಂದ ಅಂತಹ ನಿರಾಕ್ಷೇಪಣಾ ಪತ್ರವನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.
15. ನೈಸರ್ಗಿಕವಾಗಿ ಹರಿಯುವ ನದಿ/ಹಳ್ಳ ಅಥವಾ ಕೆರೆ ಮುಂತಾದವುಗಳಿಗೆ ಬಡಾವಣೆಯ ಯಾವುದೇ ಮಲಿನ ನೀರನ್ನು ಹರಿಯಬಿಡಬಾರದು.
16. ಈ ಅನುಮೋದಿತ ವಸತಿ ಬಡಾವಣೆಯಲ್ಲಿ ನಕ್ಷೆ ಪ್ರದೇಶದಲ್ಲಿ ಬರುವ 'ಬಿ' ಖರಾಬು ಜಮೀನುಗಳು ಸರ್ಕಾರಕ್ಕೆ ಸೇರಿರುತ್ತದೆ. ಈ ಜಮೀನುಗಳನ್ನು ಯಥಾ ಸ್ಥಿತಿಯಂತೆ ಕಾಪಾಡತಕ್ಕದ್ದು. ಹಾಗೂ ಅತಿಕ್ರಮಣ ಮಾಡಬಾರದು ಹಾಗೂ ಇತರೆ ಉದ್ದೇಶಗಳಿಗಾಗಿ ಉಪಯೋಗಿಸತಕ್ಕದ್ದಲ್ಲ.
17. ಅನುಮೋದಿತ ವಿನ್ಯಾಸದಲ್ಲಿ ಕೊಳವೆ ಬಾವಿಯನ್ನು ಕೊರೆಯುವಾಗ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯತಕ್ಕದ್ದು. ಹಾಗೂ ತೆರೆದ ಕೊಳವೆ ಬಾವಿಯ ಬಗ್ಗೆ ಭೂ ಮಾಲೀಕರುಗಳು ಮತ್ತು ಸ್ಥಳೀಯ ಸಂಸ್ಥೆಗಳು ಸಂರಕ್ಷಣೆ ಮಾಡಲು ದಿನಾಂಕ:31/12/2012 ಮತ್ತು ದಿನಾಂಕ:06/08/2014 ರಂದು ಸರ್ಕಾರವು ನೀಡಿರುವ ನಿರ್ದೇಶನಗಳಂತೆ ತಪ್ಪದೇ ಕ್ರಮವಹಿಸತಕ್ಕದ್ದು.
18. ಸದರಿ ಬಡಾವಣೆಯಲ್ಲಿ ಸುತ್ತಲೂ ಕಾಂಪೌಂಡ್ ನಿರ್ಮಿಸಿ, ಗೇಟನ್ನು ಅಳವಡಿಸಿ **"ಗೇಟೆಡ್ ಕಮ್ಯುನಿಟಿ"** ಎಂಬ ಹೆಸರಿನಲ್ಲಿ ನಿವೇಶನಗಳನ್ನು ಮಾರಾಟ **ಮಾಡುವುದನ್ನು ನಿಷೇಧಿಸಲಾಗಿದೆ.** ಹಾಗೂ ಸದರಿ ಬಡಾವಣೆಯಲ್ಲಿನ ರಸ್ತೆ ಆಟದ ಮೈದಾನ / ಉದ್ಯಾನವನ / ಬಯಲುಜಾಗೆ/ವಾಹನ ನಿಲುಗಡೆ ಜಾಗೆಗಳು ಸಾರ್ವಜನಿಕ ಸ್ವತ್ತಾಗಿರುತ್ತದೆ. ಆದ್ದರಿಂದ, **ಸಾರ್ವಜನಿಕ ಸ್ವತ್ತುಗಳನ್ನು ಮುಕ್ತವಾಗಿಡತಕ್ಕದ್ದು.**
19. **ಈ ಅನುಮೋದಿತ ವಿನ್ಯಾಸ ನಕ್ಷೆಯು ನಿಗಧಿಪಡಿಸಲಾದ ಮಾಪನ (ಸ್ಕೇಲ್)ದಲ್ಲಿ ವ್ಯತ್ಯಾಸ ಇರುವುದು ಕಂಡು ಬಂದಲ್ಲಿ ಅದನ್ನು ಸೂಕ್ತವಾಗಿ ಸ್ಥಳದ ವಸ್ತು ಸ್ಥಿತಿ ಹಾಗೂ ಅಳತೆ ಪರಿಮಾಣಕ್ಕೆ ಅನುಗುಣವಾಗಿ ಪರಿಷ್ಕೃತ ವಿನ್ಯಾಸಕ್ಕೆ ಅನುಮೋದನೆ ಪಡೆಯತಕ್ಕದ್ದು.**

. . . .4

20. ಈ ಅನುಮೋದನೆಯು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸುವುದಕ್ಕೆ ಉಪಯೋಗಿಸಲು ಬರುವುದಿಲ್ಲ.
21. ಕಂದಾಯ ಇಲಾಖೆಯಿಂದ ನೀಡಿರುವ ದಾಖಲೆ ಮತ್ತು ಸರ್ವೆ ನಕ್ಷೆಯನ್ವಯ ವಿನ್ಯಾಸ ತಯಾರಿಸಲಾಗಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಈ ಕಛೇರಿಯು ಜವಾಬ್ದಾರಿಯಾಗಿರುವುದಿಲ್ಲ.
22. ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಯು ತಪ್ಪಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಅಂಗೀಕಾರ ತಾನಾಗಿ ರದ್ದುಗೊಳುತ್ತದೆ ಹಾಗೂ ಒಟ್ಟಾರೆ ಪ್ರಸ್ತಾವನೆಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಈ ಸ್ಥಳೀಯ ಸಂಸ್ಥೆ ಅಥವಾ ಸಂಬಂಧಿಸಿದ ಸರ್ಕಾರಿ ಕಛೇರಿಯು ಜವಾಬ್ದಾರಿಯಾಗಿರುವುದಿಲ್ಲ.

20/10/2020

ನಗರ ಮತ್ತು ಗ್ರಾಮಾಂತರ ಯೋಜನಾ
ಜಂಟಿ ನಿರ್ದೇಶಕರು,
ಬೆಂಗಳೂರು ವಿಭಾಗ, ಬೆಂಗಳೂರು.

20/10/2020 20/10/2020

<u>ಪ್ರತಿಯನ್ನು:</u>

1. ಮಾನ್ಯ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ಬೆಂಗಳೂರು ಇವರಿಗೆ ನಕ್ಷೆಯ ಪ್ರತಿಯೊಂದಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ಚಿಕ್ಕಬಳ್ಳಾಪುರ ರವರಿಗೆ ನಕ್ಷೆಯ ಪ್ರತಿಯೊಂದಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.
3. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕುಂಭಿಗಾನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇವರಿಗೆ ತಾಂತ್ರಿಕವಾಗಿ ಅನುಮೋದಿಸಿರುವ ವಿನ್ಯಾಸ ನಕ್ಷೆಯ 3 ಪ್ರತಿಗಳೊಂದಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ ಹಾಗೂ ವಿನ್ಯಾಸಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಕಾಯ್ದೆಯಡಿಯಲ್ಲಿ ಅನುಮೋದಿಸಿದ ನಂತರ ಒಂದು ಪ್ರತಿಯನ್ನು (ಆದೇಶದೊಂದಿಗೆ) ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಚಿಕ್ಕಬಳ್ಳಾಪುರ ರವರಿಗೆ ಕಳುಹಿಸುವಂತೆ ತಿಳಿಸಿದೆ.
4. ಅರ್ಜಿದಾರರಾದ ಶ್ರೀ ನಡಿಂಪಲ್ಲಿ ಶ್ರೀನಿವಾಸರಾಜು ಬಿನ್ ರಾಮಲಿಂಗರಾಜು, ಶ್ರೀಮತಿ ಪೆನ್ಮತ್ಸ ಲಕ್ಷ್ಮೀ ಶೈಲಜ ಬಿನ್ ಶ್ರೀ ಜಿ. ರಂಗರಾಜು ಮತ್ತು ಶ್ರೀಮತಿ ನಡಿಂಪಲ್ಲಿ ಕೃಷ್ಣವೇಣಿ ಕೋಂ ಶ್ರೀ ನಡಿಂಪಲ್ಲಿ ಶ್ರೀನಿವಾಸರಾಜು ರವರುಗಳ ಪರವಾಗಿ ಜಿ.ಪಿ.ಎ. ಪ್ರತಿನಿಧಿಗಳಾದ ಮೆ.ಹೌಸ್ಲೋ ಪಾಲುದಾರರಾದ 1. ಶ್ರೀ ಹರೀಶ್ ವಿ. ಬಿನ್ ಶ್ರೀ ವೆಂಕಟೇಶ್ ರೆಡ್ಡಿ, 2. ಶ್ರೀ ವೈ. ಶ್ರೀನಿವಾಸ ರೆಡ್ಡಿ ಬಿನ್ ಶ್ರೀ ರಾಜಶೇಖರ್ ರೆಡ್ಡಿ 3. ಶ್ರೀ ಮಂತೇನಾ ಪ್ರವೀಣ್ ಬಿನ್ ಶ್ರೀ ಪಾಂಡುರಂಗ ರಾಜು, ನಂ. 303, ಪ್ರೈಮ್ ಹನಿ ಡಿ.ಯು ಅಪಾರ್ಟ್‌ಮೆಂಟ್, ಚಾಯ ಆಸ್ಪತ್ರೆ ಪಕ್ಕ, ಚನ್ನಸಂದ್ರ, ಒ.ಎಮ್.ಬಿ.ಆರ್.ಲೇ ಔಟ್, ಬೆಂಗಳೂರು-560043 ಇವರ ಮಾಹಿತಿಗಾಗಿ ಕಳುಹಿಸಿದೆ.
5. ವಿನ್ಯಾಸ ಪ್ರತಿಗಳ ಮಾಸ್ಟರ್ ಕಡತಕ್ಕೆ ಮಾಹಿತಿಗಾಗಿ.
6. ಕಚೇರಿ ಪ್ರತಿ.